O.S .No.370/2015
PW-2

ದಿನಾಂಕ: 14.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ 1 ರಿಂದ 3 ರವರ ಪರ ಶ್ರೀ ಬಿ ಎ ಎಸ್ ವಕೀಲರಿಂದಃ</u>**

ನೀವು ಕಟ್ಟೆ ಮಳಲವಾಡಿಯಲ್ಲಿ ವಾಸ ಇದ್ದೀರಿ ಎಂದರೆ ಸರಿ. ನ್ಯಾಯಾಲಯಕ್ಕೆ ಸಲ್ಲಿಸದ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಾ ಎಂದರೆ ಸಾಕಿ ಇಲ್ಲ ಎಂದು ಹೇಳುತ್ತಾರೆ. ಪ್ರಮಾಣ ಪತ್ರವನ್ನು ಹೇಳಿ ಬರೆಸಿದ್ದು ಯಾರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತ-ರೆ. ಪ್ರಮಾಣ ಪತ್ರದಲ್ಲಿ ಕಾಳೇನಹಳ್ಳಿಯಲ್ಲಿ ವಾಸ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.ದಾವೆಯನ್ನು ಯಾವ ವಿಚಾರವಾಗಿ ಹೂಡಲಾಗಿದೆ ಎಂದು ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವೆಯನ್ನು ಯಾವ ಸರ್ವೆ ನಂಬರ್ ನ ಮೇಲೆ ಹೂಡಲಾಗಿದೆ ಎಂದರೆ ಸಾಕ್ಷಿ 748 ಎಂದು ಹೇಳುತ್ತಾರೆ. ಗುರುದೇವ ರವರ ಜಮೀನಿನ ಚಕ್ಕುಬಂಧಿ ಗೊತ್ತಾ ಎಂದರೆ ಸಾಕ್ಷಿ ಹೇಳಲಾಗುವುದಿಲ್ಲ ಎಂದು ಹೇಳುತ್ತಾರೆ.

ಸರ್ವೇ ನಂಬರ್ 748 ರಲ್ಲಿ ನನಗೆ 4 ಎಕರೆ ಜಮೀನು ಇದೆ. ನನ್ನ ಜಮೀನಿನ ಪೂ- ವೆಂಕಟೇಶ ರವರ ಜಮೀನು ಇದೆ. ವೆಂಕಟೇಶ ರವರ ಜಮೀನಿನ ಚಕ್ಕುಬಂಧಿ ಹೇಳಲಾಗುತ್ತದೆಯೇ ಎಂ ದರೇ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೇ ನಂಬರ್ 748 ರಲ್ಲಿ ಒಟ್ಟು ವಿಸ್ತೀರ್ಣದ ಜಮೀನು ಇದೆ ಎಂದರೆ ಸಾಕ್ಷಿ 28 ಎಕರೆ ಎಂದು ಹೇಳುತ್ತಾರೆ. 28 ಎಕರೆ ಜಮೀನನ್ನು ಯಾರಾರು ಮಾಡುತ್ತಿದದಾರೆ ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಜಮೀನಿಗೂ ಹಾಗೂ ದಾವಾ ಆಸ್ತಿಗೂ ಎಷ್ಟು ದೂರ ಇದೆ ಎಂದರೆ ಸಾಕ್ಷಿ ದಾವಾ ಆಸ್ತಿಗೆ ಹೊಂದಿ ಕೊಂಡಂತೆ ಇದೆ ಎಂದು ಹೇಳುತ್ತಾರೆ. ದವಾ ಆಸ್ತಿಯ ಯಾವ ದಿಕ್ಕಿಗೆ ನಿಮ್ಮ ಜಮೀನು ಇದೆ ಎಂದರೆ ಸಾಕ್ಷಿ ಪೂ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಚಕ್ಕುಬಂಧಿಯನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.ದಾವೆಯನ್ನು ಯಾವ ಪರಿಹಾರ ಕೋರಿ ಹುಡಲಾಗಿದೆ ಎಂದು ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನೀವು ಕಟ್ಟೆ ಮಾಳಲವಾಡಿಯಲ್ಲಿ ವಾಸ ಇರುವುದರಿಂದ ನಿಮ್ಮ ಜಮೀನು ನನ್ನು ಬಾಬು ಮತ್ತು ಅಸ್ಲಂ ಅನ್ನುವವರು ಗುತ್ತಿಗೆಗೆ ಕೊಟ್ಟು ಅವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಒಂದು ವರ್ಷದ ವಾಯಿದೆಗೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಗುರುದೇವ ರವರ ಮಕ್ಕಳು ಸ್ವಾಧಿನ ಇದ್ದಾರೆ ಎಂದರೆ ಸರಿ. ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ವಾದಿಯರು ಚಿಕ್ಕಂದಿನಿಂದಲೂ ಹುಟ್ಟಿ ಬೆಳೆದದ್ದು ಶನಿವಾರ ಸಂತೆಯಲ್ಲಿ ಎಂದರೆ ಸರಿ. ವಾದಿಯರು ಯಾವತ್ತೂ ಕಾಳೇನಹಳ್ಳಿಯಲ್ಲಿ ವಾಸ ಇಲ್ಲ ಎಂದರೆ ಸಾಕ್ಷಿ ಮದುವೆಯಾದ ಮೇಲೆ ಅಲ್ಲಿ ಹೋದರು ಎಂದು ಹೇಳುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

ದಿನಾಂಕ: 14.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ 1 ರಿಂದ 3 ರವರ ಪರ ಶ್ರೀ ಬಿ ಎ ಎಸ್ ವಕೀಲರಿಂದಃ</u>**

ನಾನು ಕಾಳೇನಹಳ್ಳಿಯಲ್ಲಿ 40 ವರ್ಷಗಳಿಂದ ವಾಸಿ ಇರುತ್ತೇನೆ. ವಾದಿಗಳಿಗೆ ನೀವು ಸೋದರ ಮಾವ ಎಂದರೆ ಸರಿ. ಅಬ್ದುಲ್ ಮಜೀದ್ ರವರು ಕಾಳೇನಹಳ್ಳಿಯಲ್ಲಿ ಒಬ್ಬರೇ ವಾಸ ಇದ್ದರು ಎಂದರೆ ಸಾಕ್ಷಿ ಮಕ್ಕಳ ಜೊತೆ ವಾಸ ಇದ್ದರು ಎಂದು ಹೇಳುತ್ತಾರೆ. ವಾದಿಯರು ಹಾಗೂ ಅವರ ತಾಯಿ ಶನಿವಾರ ಸಂತೆ ಯಲ್ಲಿ ವಾಸ ಇದ್ದರು ಎಂ ದರೆ ಮದುವೆಯಾದ ಮೇಲೆ ವಾಸ ಇದ್ದರು ಎಂದು ಹೇಳುತ್ತಾರೆ. ವಾದಿಯರ ಮದುವೆ ಯಾವಾಗ ಆಯಿತು ಎಂದು ಗೊತ್ತಿಲ್ಲ. ವಾದಿಯರು ಶನಿವಾರ ಸಂತೆ ಯಲ್ಲಿ ಹುಟ್ಟಿ ಬೆಳೆದಿದ್ದು, ಹಾಗೂ ಅಲ್ಲೆ ವಾಸ ಇದ್ದಾರೆ ಎಂರೆ ಸಾಕ್ಷಿ ಇಲ್ಲಿ ಹುಟ್ಟಿ ಬೆಳದಿದ್ದು ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿದ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಾದಿಯರು ನನ್ನ ಪ್ರಮಾಣ ಪತ್ರವನ್ನು ಹೇಳಿ ಬರೆಸಿರುತ್ತಾರೆ. ವಾದಿಯರು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳುವಂತೆ ನಿಮಗೆ ಹೇಳಿಕೊಟ್ಟ ಕರೆ ತಂದಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನನಗೆ ಕಾಳೇನಹಳ್ಳಿಯಲ್ಲಿ ಜಮೀನು ಇದ್ದು, ಅದರ ಸರ್ವೇ ನಂಬರ್ 748 1 ವರೆ ಎಕರೆ ಇದೆ. ದಾವಾ ಅಸ್ತಿ ನಿಮ್ಮ ಜಮೀನಿನಂದ ಎಷ್ಟು ದೂರ ಇದೆ ಎಂದರೆ ಸಾಕ್ಷಿ 4 ಎಕರೆ ಬಿಟ್ಟು ಇದೆ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಹೊಂದಿಕೊಂಡಂತೆ ನಿಮಗೆ ಸೇರಿದ ಜಮೀನು ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸರ್ವೇನಂಬರ್ 748 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ 25 ಎಕರೆ ಎಂದು ಹೇಳುತ್ತಾರೆ. 25 ಎಕರೆ ಜಮೀನಿನಲ್ಲಿ ಯಾರಾರು ಎಷ್ಟೆಷ್ಟು ವಿಸ್ತೀರ್ಣ ದ ಜಮೀನಿನಲ್ಲಿ ಸ್ವಾಧಿನ ಇದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಪ್ರತಿವಾದಿಯ ತಂದೆ ಗೊತ್ತು. ಪ್ರತಿವಾದಿಯರಿಗೆ ಸೇರಿದ ಜಮೀನು ಸರ್ವೇ ನಂಬರ್ 748 ರಲ್ಲಿ ಇದೆ ಎಂದರೆ ಸರಿ. ಪ್ರತಿವಾದಿಯ ತಂದೆಗೆ ಸರ್ವೇ ನಂಬರ್ 748 ರಲ್ಲಿ 1 ವರೆ ಎಕರೆ ಸಾಗುವಳಿ ನೀಡಲಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಪ-ಪ್ರತಿವಾದಿಯರ ತಂದೆ ಗುರುದೇವ ರವರಿಗೆ ಸಾಗುವಳಿ ನೀಡಿರುವ ಜಮೀನು ಇದೆ ಎಂದರೆ ಸರಿ. ಪ್ರತಿವಾದಿಯರು ಅವರ ತಂದೆ ಗುರುದೇವ ರವರಿಗೆ ನೀಡಲಾದ ಸಾಗುವಳಿ ಜಮೀನು 1 ವರೆ ಎಕರೆ ಹಾಗೂ ದಾವಾ ಆಸ್ತಿ 1 ವರೆ ಎಕರೆಯನ್ನು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ವಾದಿಯರು 1 ವರೆ ಎಕರೆ ವ್ಯವಸಾಯ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

ಮೃತ ಅಬ್ದುಲ್ ಮಜೀದ ರವರು 1996 ರಲ್ಲಿ ಪ್ರತಿವಾದಿಯರ ತಂದೆಗೆ ನೊಂದಾಯಿತು

ಮರಣ ಶಾಸನ  ಪ್ರಮಾಣ ಪತ್ರವನ್ನು ದಾವಾ ಆಸ್ತಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಬ್ದುಲ್ ಮಜೀದ 2004 ರಲ್ಲಿ   ತೀರಿಕೊಂಡಿದ್ದು, ಅವರು ತೀರಿಕೊಂಡ ನಂತರ  ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನ ದಲ್ಲಿ ಇದ್ದಾರೆ ಎಂದರೆ  ಸಾಕ್ಷಿ  ಅಬ್ದುಲ್ ಮಜೀದ  ರವರ ಮಕ್ಕಳು ಇದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ಯಾರು ದಾವಾ ಅಸ್ತಿಯ  ಸ್ವಾಧೀನದಲ್ಲಿ  ಇದ್ದರೂ ವಾದಿಯರಿಗೆ ನೀವು  ಸೋದರ ಮಾವ  ಆಗಿರುವುದಿರಿಂದ ಸುಳ್ಳು  ಹೇಳುತ್ತಿದ್ದೀರಾ  ಎಂದರೆ  ಸರಿಯಲ್ಲ. ವಾದಿಯರು  ದಾವಾ ಆಸ್ತಿಯ  ಸ್ವಾದಿನದಲ್ಲಿ ಇಲ್ಲದೆ ಇದ್ದರೂ  ಅವರಿಗೆ ಅನುಕೂಲ ಮಾಡಿಕೊಡಲು ಸ್ವಾಧಿನ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ  ಸರಿಯಲ್ಲ.  ಈಗಲೂ ಸಹ  ಪ್ರತಿವಾದಿಯರು ದಾವಾ ಆಸ್ತಿಯಲ್ಲಿ  ಸ್ವಾದಿಂನ ಇದ್ದಾರೆ  ಎಂದರೆ ಸರಿಯಲ್ಲ.

**ಮರುವಿಚಾರಣೆ  ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

O.S No. 56/2012

ಡಿಬ್ಲೂ-2

ದಿನಾಂಕ:09.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಡಿ ಪಿ ಎಂ ವಕೀಲರಿಂದಃ**

ಕೂಗಿಸಲಾಯಿತು ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೂಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

ನರಸಿಂಹಸ್ವಾಮಿ ತಿಟ್ಟುವಿನಲ್ಲಿ 35-40 ವರ್ಷಗಳಿಂದ ಇದ್ದೇವೆ. ನನ್ನ ತಂದೆ ಮತ್ತು ತಾಯಿ ಹುಣಸೂರಿನವರು. 1 ನೇ ವಾದಿ ಮೂಲತಃ ತಮಿಳುನಾಡಿನವರು. 1 ನೇ ವಾದಿ ಹುಣಸೂರಿನಲ್ಲಿ 20 ವರ್ಷ ವಾಸ ಇದ್ದರು. 20 ವರ್ಷಗಳ ನಂತರ 1 ನೇ ವಾದಿ ತಮಿಳುನಾಡಿಗೆ ವಾಪಸ್ಸು ಹೋದರು. ನಾನು 1 ನೇ ವಾದಿಯನ್ನು ಮೊದಲನೇ ಬಾರಿ ನೋಡಿದಾಗ 50 ವರ್ಷ ಗಳ ಒಳಗೆ ವಯಸ್ಸು ಆಗಿತ್ತು. 1 ನೇ ವಾದಿ ಯಾವ ವರ್ಷದಲ್ಲಿ ಮದುವೆಯಾದರು ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನೇ ಅವಾಗ ಚಿಕ್ಕವಾನಾಗಿದ್ದೆ ಎಂದು ಹೇಳುತ್ತಾರೆ. 1 ನೇ ವಾದಿ ಹುಣಸೂರಿನಲ್ಲಿ ವಾಸ ಇದ್ದ ಮನೆ ಈಗಲೂ ಇದೆಯೇ ಎಂದರೆ ಸಾಕ್ಷಿ ಒಡೆದು ಹಾಕಿದ್ದಾರೆ ಎಂದು ಹೇಳುತ್ತಾರೆ. 1 ನೇ ವಾದಿ ರಾಯಪ್ಪನ್ನು ಮದುವೆಯಾದ ಬಗ್ಗೆ ದಾಖಲಾತಿ ನೋಡಿದ್ದೀರಾ ಎಂದರೆ ಸಾಕ್ಷಿ ದಾಖಲಾತಿ ಇಲ್ಲ , ರಾಯಪ್ಪ ಅಕ್ಕನ ಮಗಳನ್ನು ಮದುವೆ ಯಾಗಿದ್ದರು ಎಂದು ಹೇಳುತ್ತಾರೆ. ರಾಯಪ್ಪ ನವರು ತಮಿಳುನಾಡಿನವರು. ರಾಯಪ್ಪನ ತಂದೆ ಹೆಸರು ಗೊತ್ತಿಲ್ಲ, 1 ನೇ ಪ್ರತಿವಾದಿ ಯನ್ನು ರಾಯಪ್ಪ ಯಾವಾ ಗ ಮದುವೆ ಯಾದರು ಎಂದುನ ಗೊತ್ತಾ ಎಂದರೆ ಸಾಕ್ಷಿ ಕೆ ಆರ್ ಎಸ್ ಡ್ಯಾಮ್ ಕಟ್ಟುವಾಗ ರಾಯಪ್ಪನ ತಂದೆ ಕರೆದುಕೊಂಡು ಬಂದು ಬಿಟ್ಟರು ಎಂದು ಹೇಳುತ್ತಾರೆ. 1 ನೇ ವಾದಿಯ ಮಕ್ಕಳನ್ನು ನೋಡಿರುತ್ತೇನೆ.

ಜಮೀನಿಗೆ ಸಂಬಂಧ ಪಟ್ಟಂತೆ ಎನೇನೂ ವ್ಯವಹಾರ ಮಾಡಲಾಗಿದೆ ಎಂದು ನೆಮೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವೆಯನ್ನು ಭಾಗ ಕೋರಿ ಹೂಡಲಾಗಿದೆ. ವಾದಿಯರು ಎನೂ ಒಪ್ಪಂದ , ಕರಾರು ಬರೆದುಕೊಟ್ಟಿದ್ದಾರೆ ಎಂದು ತಿಳಿಸಿದಐರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ವಾದಿಯರ ಸಂಬಂಧದ ಬಗ್ಗೆ ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿ. ವಾದಿಯರ ಸಂಬಂಧದ ಬಗ್ಗೆ ಎನಾದರೂ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಈಗ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಅಸ್ತಿಯಲ್ಲಿ 6 ನೇ ಪ್ರತಿವಾದಿ ನಿವೇಶನಗಳನ್ನು ವಿಂಗಡಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

O.S No. 94/2011

ಪಿ ಡಬ್ಲೂ-1

ದಿನಾಂಕ: 02.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ 6 ರವರ ಪರ ಶ್ರೀ ಜೆ ಎಂ ಎ ವಕೀಲರಿಂದಃ

ನರಸಿಂಹಸ್ವಾಮಿ ತಿಟ್ಟುವಿನಲ್ಲಿ 35-40 ವರ್ಷಗಳಿಂದ ಇದ್ದೇವೆ. ನನ್ನ ತಂದೆ ಮತ್ತು ತಾಯಿ ಹುಣಸೂರಿನವರು. 1 ನೇ ವಾದಿ ಮೂಲತಃ ತಮಿಳುನಾಡಿನವರು. 1 ನೇ ವಾದಿ ಹುಣಸೂರಿನಲ್ಲಿ 20 ವರ್ಷ ವಾಸ ಇದ್ದರು. 20 ವರ್ಷಗಳ ನಂತರ 1 ನೇ ವಾದಿ ತಮಿಳುನಾಡಿಗೆ ವಾಪಸ್ಸು ಹೋದರು. ನಾನು 1 ನೇ ವಾದಿಯನ್ನು ಮೊದಲನೇ ಬಾರಿ ನೋಡಿದಾಗ 50 ವರ್ಷ ಗಳ ಒಳಗೆ ವಯಸ್ಸು ಆಗಿತ್ತು. 1 ನೇ ವಾದಿ ಯಾವ ವರ್ಷದಲ್ಲಿ ಮದುವೆಯಾದರು ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನೇ ಅವಾಗ ಚಿಕ್ಕವಾನಾಗಿದ್ದೆ ಎಂದು ಹೇಳುತ್ತಾರೆ. 1 ನೇ ವಾದಿ ಹುಣಸೂರಿನಲ್ಲಿ ವಾಸ ಇದ್ದ ಮನೆ ಈಗಲೂ ಇದೆಯೇ ಎಂದರೆ ಸಾಕ್ಷಿ ಒಡೆದು ಹಾಕಿದ್ದಾರೆ ಎಂದು ಹೇಳುತ್ತಾರೆ. 1 ನೇ ವಾದಿ ರಾಯಪ್ಪನ್ನು ಮದುವೆಯಾದ ಬಗ್ಗೆ ದಾಖಲಾತಿ ನೋಡಿದ್ದೀರಾ ಎಂದರೆ ಸಾಕ್ಷಿ ದಾಖಲಾತಿ ಇಲ್ಲ , ರಾಯಪ್ಪ ಅಕ್ಕನ ಮಗಳನ್ನು ಮದುವೆ ಯಾಗಿದ್ದರು ಎಂದು ಹೇಳುತ್ತಾರೆ. ರಾಯಪ್ಪ ನವರು ತಮಿಳುನಾಡಿನವರು. ರಾಯಪ್ಪನ ತಂದೆ ಹೆಸರು ಗೊತ್ತಿಲ್ಲ, 1 ನೇ ಪ್ರತಿವಾದಿ ಯನ್ನು ರಾಯಪ್ಪ ಯಾವಾ ಗ ಮದುವೆ ಯಾದರು ಎಂದುನ ಗೊತ್ತಾ ಎಂದರೆ ಸಾಕ್ಷಿ ಕೆ ಆರ್ ಎಸ್ ಡ್ಯಾಮ್ ಕಟ್ಟುವಾಗ ರಾಯಪ್ಪನ ತಂದೆ ಕರೆದುಕೊಂಡು ಬಂದು ಬಿಟ್ಟರು ಎಂದು ಹೇಳುತ್ತಾರೆ. 1 ನೇ ವಾದಿಯ ಮಕ್ಕಳನ್ನು ನೋಡಿರುತ್ತೇನೆ.

ಜಮೀನಿಗೆ ಸಂಬಂಧ ಪಟ್ಟಂತೆ ಏನೇನೂ ವ್ಯವಹಾರ ಮಾಡಲಾಗಿದೆ ಎಂದು ನೆಮೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವೆಯನ್ನು ಭಾಗ ಕೋರಿ ಹೂಡಲಾಗಿದೆ. ವಾದಿಯರು ಎನೂ ಒಪ್ಪಂದ , ಕರಾರು ಬರೆದುಕೊಟ್ಟಿದ್ದಾರೆ ಎಂದು ತಿಳಿಸಿದಐರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ವಾದಿಯರ ಸಂಬಂಧದ ಬಗ್ಗೆ ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿ. ವಾದಿಯರ ಸಂಬಂಧದ ಬಗ್ಗೆ ಎನಾದರೂ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಈಗ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಅಸ್ತಿಯಲ್ಲಿ 6 ನೇ ಪ್ರತಿವಾದಿ ನಿವೇಶನಗಳನ್ನು ವಿಂಗಡಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

ನಾನು ಅನಕ್ಷರಸ್ಥ. ನಿಮ್ಮ ಜನನ ಪ್ರಮಾಣ ಪತ್ರ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಾನು ಯಾವ ದಿನಾಂಕ, ವರ್ಷದಂದು ಜನಿಸಿರುತ್ತೇನೆಂದು ಗೊತ್ತಿಲ್ಲ. ನಾನು ಬಿಳಿಕೆರೆ ಹೂಬಳಿಯ ಗಾಗೆನಹಳ್ಳಿಯಲ್ಲಿ ಜನಿಸಿರುತ್ತೇನೆ. ನನ್ನ ತಂದೆಯ ಹೆಸರು ಗಾಡಿ ಬೋರಯ್ಯ. ಗಾಗೆನಹಳ್ಳಿಯಲ್ಲಿ ನನ್ನ ತಂದೆಯ ದೊಡ್ಡ ಹೆಂಚಿನ ಮನೆ ಇದೆ. ಸದರಿ ಮನೆ ನನ್ನ ತಾಯಿಯ ಹೆಸರಿನಲ್ಲಿ ಇದೆ. ನಿಮ್ಮ ತಾಯಿಯ ಹೆಸರಿಗೆ ಬರುವ ಮುಂಚಿತವಾಗಿ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಸರ್ಕಾರ ಕೊಟ್ಟಿದ್ದು ಎಂದು ಹೇಳುತ್ತಾರೆ. ಸರ್ಕಾರದಿಂದ ಮನೆಯನ್ನು ನನ್ನ ತಾಯಿಯ ಹೆಸರಿಗೆ ಕೊಟ್ಟಿರುತ್ತಾರೆ. ಗಾಗೆನಹಳ್ಳಿಯಲ್ಲಿ ವಾಸ ಇರುವ ಗಾಡಿಬೋರಯ್ಯನ ಮಗ ನೀವು ಎಂದರೆ ಸರಿ. ನ್ಯಾಯಾಲಯಕ್ಕೆ ಸಲ್ಲಿಸಿದ ತಕರಾರಿನಲ್ಲಿ ಗಾಗೆನಹಳ್ಳಿಯಲ್ಲಿ ಸರ್ಕಾರದಿಂದ ಮನೆ ಕೊಡಲಾಗಿತ್ತು ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸದರಿ ಮನೆಯನ್ನು ದಾವೆಯಲ್ಲಿ ಸೇರಿಸಲು ನಿಮಗೆ ತೂಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಾನು ವಾರಂಚಿಯ ಗ್ರಾಮದಲ್ಲಿ ವಾಸ ಇರುತ್ತೇನೆ. ನಾನು ವಾಸ ಇರುವ ಮನೆ ಸರ್ಕಾರದಿಂದ ಗಾಡಿ ಬೋರಯ್ಯನಿಗೆ ಕೊಡಲಾಗಿತ್ತು. ಸದರಿ ಮನೆಯಲ್ಲಿ ನೀವು ಒಬ್ಬರೆ 30 ವರ್ಷದಿಂದ ವಾಸ ಇದ್ದೀನಿ ಎಂದರೆ ಸರಿ.

ಗಾಡಿಬೊರಯ್ಯನಿಗೆ ಸಣ್ಣಮ್ಮ ಎಂಬ ಒಬ್ಬಳೇ ಹೆಂಡತಿ ಇದ್ದು, 2 ಮತ್ತು 3 ನೇ ಪ್ರತಿವಾದಿಗೆ ಗಾಡಿಬೋರಯ್ಯ ಹಾಗೂ ಸಣ್ಣಮ್ಮನ ಮಕ್ಕಳು ಎಂದರೆ ಸಾಕ್ಷಿ ಗಾಡಿಬೋರಯ್ಯ ಕಿರಿಯ ಹೆಂಡತಿ ಹಾಗೂ ಅವರ ಮಕ್ಕಳು ಎಂದು ಹೇಳುತ್ತಾರೆ. ನೀವು ಗಾಗೆನಹಳ್ಳಿಯ ಗ್ರಾಮದಲ್ಲಿ ವಾಸವಾಗಿರುವ ಗಾಡಿಬೋರಯ್ಯ ನ ಮಗ ನೀವು, ವಾರಂಚಿಯ ಗಾಡಿಬೋರಯ್ಯ ನ ಮಗ ಅಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿ ಸಿಂಗಮ್ಮ ಗಾಗೆನಹಳ್ಳಿ ಗ್ರಾಮದ ಗಾಡಿಬೋರಯ್ಯ ನ ಹೆಂಡತಿ ಎಂ ದರೆ ಸುಳ್ಳು. 2 ಮತ್ತು 3 ನೇ ವಾದಿ ಗಾಗೆನಹಳ್ಳಿ ಗ್ರಾಮದ ಗಾಡಿಬೋರಯ್ಯ ನ ಮಕ್ಕಳು ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿ ಹೊಸ ವಾರಂಚಿ ಗ್ರಾಮದಲ್ಲಿ ವಾಸವಾಗಿರುವ ಗಾಡಿಬೋರಯ್ಯನ ಮಕ್ಕಳು ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಯಾವ ದಾಖಲಾತಿ ಕೊಟ್ಟಿದ್ದೀರಾ ಎಂದು ಹೇಳಲಾಗುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲಾತಿ ಕೂಟ್ಟಿದ್ದೀರಾ ಎಂದರೆ ಸಾಕ್ಷಿ ವಾದಿಯರು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ . ಸದರಿ ದಾಖಲಾತಿಯನ್ನು ನೀವು ನೊಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಾದಿಯರು ಯಾವಾವ ದಾಖಲಾತಿಗಳನ್ನು ಕೊಟ್ಟಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.ದಾವಾ ಆಸ್ತಿಯ ಮೇಲೆ ನಿಮಗಾಗಾಲಿ, ವಾದಿಯರಿಗಾಗಲಿ, ಯಾವುದೇ ಹಕ್ಕು ಸ್ವಾಧಿನ ಅನುಭವ ಇಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ತರಿಕಲ್ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 3 ನೇ ವಾದಿ ಸಿದ್ದಮ್ಮ ಕಿರಂಗೂರು ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಹೊಸ ವಾರಂಚಿಯಿಂದ , ತರಿಕಲ್ ಗ್ರಾಮ ಎಪ್ಟು ದೂರ ಆಗುತ್ತದೆ ಎಂದರೆ ಸಾಕ್ಷಿ 5-6 ಕಿ ಮೀ ಆಗುತ್ತದೆ ಎಂದು ಹೇಳುತ್ತಾರೆ.ಹೊಸವಾರಂಚಿಯಿಂದ ಕಿರಂಗೂರು ಗ್ರಾಮ ಎಷ್ಟು ಕಿ.ಮೀ ದೂರ ಆಗುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಹೊಸವಾರಂಚಿಯಿಂದ , ಕಿರಂಗೂರು ಗ್ರಾಮ 20 ಕೀ ಮೀ ದುಾರದಲ್ಲಿದೆ ಎಂದರೆ ಸರಿಯಲ್ಲ. ನಿಮ್ಮ ತಾಯಿ ಮೃತ 1 ನೆ ವಾದಿ ಸಿಂಗಮ್ಮ , ಸಾಯುವವರೆಗೂ ಗಾಗೇನಹಳ್ಳಿ ಗ್ರಾಮದಲ್ಲಿ ಇದ್ದರು ಎಂದರೆ ಸಾಕ್ಷಿ ಹೊಸ ವಾರಂಚಿ ಹಾಗೂ ಗಾನೇನಹಳ್ಳಿ ಗೆ ಹೋಗಿ ಬಂದು ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಿಮ್ಮ ತಾಯಿ ಸಿಂಗಮ್ಮ ಸಾಯುವವರೆಗೂ ಗಾಗೇನಹಳ್ಳಿ ಗ್ರಾಮದಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಮೃತ 1 ನೇ ವಾದಿ ಗಾಗೇನ ಹಳ್ಳಿಯ ವಾಸಿ ಎಂದು ವಾದ ಪತ್ರದಲ್ಲಿ ನಮೂದಿದೆ ಎಂದರೆ ಸಾಕ್ಷಿ ಹೌದು 2 ಕಡೆ ಇದ್ದರು ಎಂದು ಹೇಳುತ್ತಾರೆ. ನೀವು ಹೊಸವಾರಂಚಿಯಲ್ಲಿ, ನಿಮ್ಮ ತಾಯಿ ಗಾಗೇನಹಳ್ಳಿಯಲ್ಲಿ, ವಾದಿ 2 ಮತ್ತು 3 ರವರು ತರಿಕಲ್ ಹಾಗೂ ಕಿರಂಗೂರಿನಲ್ಲಿ ಸುಮಾರು 20-30 ವರ್ಷಗಳಿಂದ ಪ್ರತ್ಯೇಕವಾ ಗಿ ವಾಸ ಇದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ.

ವಾದ ಪತ್ರದಲ್ಲಿ ನಮೂದಿಸಿರುವ ವಂಶ ವೃಕ್ಷ ಸರಿ ಇದೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. 2 ರಿಂದ 4 ಪ್ರತಿವಾದಿಗಳು , ನೀವು ಹಾಗೂ ವಾದಿಯರು ದಾಯಾದಿಗಳು ಅಲ್ಲ, ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಅಲ್ಲ ಎಂದರೆ ಸರಿಯಲ್ಲ. ಗಾಡಿ ಬೋರಯ್ಯ ನ ತಂದೆಯ ಹೆಸರು ಕಾಂತಯ್ಯ ಎಂದು ತೆುಾರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆಂದು ಹೇಳುತ್ತಾರೆ. ಎನೂ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಾತನಿಗೆ 3 ಜನ ಮಕ್ಕಳು ಇರಲಿಲ್ಲ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಗಾಡಿ ಬೋರಯ್ಯ , ಅಂದಾನಯ್ಯ ಹಾಗೂ ಕರಿಯಯ್ಯ ನಿಮ್ಮ ಕುಟುಂಬಕ್ಕೆ ಸೇರಿದವರು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಅಂದಾನಯ್ಯನಿಗೆ 3 ಜನ ಮಕ್ಕಳು ಅವರುಗಳೆಂರೆ ರಾಮಸ್ವಾಮಿ , ಸಿದ್ದರಾಜು, ಪ್ರೇಮ , ನ್ಯಾಯಾಲಯಕ್ಕೆ ಸಾಕ್ಷಿ ಪಟ್ಟಿ ಕೊಟ್ಟಿರುವ ರಾಮ ಸ್ವಾಮಿ , ಸಿದ್ದರಾಜು ನಿಮ್ಮ ಕುಟುಂಬದವರು ಅಲ್ಲ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದವರೆಲ್ಲಾ 2 ರಿಂದ 4 ನೇ ಪ್ರತಿವಾದಿಗಳು ಕುಟುಂ ಬಕ್ಕೆ ಸೇರಿದವರು ಎಂದರೆ ಸರಿಯಲ್ಲ. 3 ನೇ ವಾದಿಗೆ 3 ಜನ ಮಕ್ಕಳು. 3 ನೇ ವಾದಿ ಮಗನಿಗೆ ವಾರಂಚಿಯ ಸಿದ್ದರಾಜು ರವರ ಮಗಳನ್ನು ಮದುವೆ ಮಾಡಿಕೊಡಲಾಗಿದೆ . ನ್ಯಾಯಾಲಯಕ್ಕೆ ಸಾಕ್ಷಿ ಪ್ಟಿಂ ◌ಲ್ಲಿ ಕಂ◌ೊಟ್ಟಿರುವ ಸಿದ್ದರಾಜು ರವರ ಮಗಳನ್ನೇ 3 ನೇ ವಾದಿಯ ಮಗನಿಗೆ ಕೊಡಲಾಗಿದೆ ಎಂದರೆ ಸರಿ. ಸಾಕ್ಷಿ ಪಟ್ಟಿಯಲ್ಲಿರುವ ರಾಮಸ್ವಾಮಿ, ಸಿದ್ದರಾಜುವಿನ ಸಹೋದರ ಎಂದರೆ ಸರಿ. 2 ರಿಂದ 4 ಪ್ರತಿವಾದಿಗಳಿಗೂ ಸಾಕ್ಷಿ ಪಟ್ಟಿಯಲ್ಲಿರುವ ರಾಮಸ್ವಾಮಿ ಹಾಗೂ ಸಿದ್ದರಾಜುವಿಗೆ 15 ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಪಟ್ಟಪಿಯಲ್ಲಿರುವ ರಾಮ ಸ್ವಾಮಿ ಹಾಗೂ ಸಿದ್ದರಾಜುವಿನ ಮಾತಿನ ಮೇರೆಗೆ ವಾದಿಯರು ಹಾಗೂಬ ನೀವು 2 ರಿಂದ 4 ನೇ ಪ್ರತಿವಾದಿಗಳಿಗೆ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಅನ್ಯತಾ ಪಾಯಿದೆಯನ್ನು ಹೊಂದಲು ಸುಳ್ಳು ದಾವೆ ಹೂಡಿ , ಸುಳ್ಳು ಸಾಕ್ಯೆ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಡಿ-40 ರಂತೆ ನೀವು ಒಬ್ಬರೇ ಪ್ರತ್ಯೇಕವಾಗಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ ಇಲ್ಲ ಕುಟುಂಬದವರೆಲ್ಲರೂ ಇದ್ದಾರೆ ಎಂದು ಹೇಳುತ್ತಾರೆ. ನಿಡಿ-38 ರಿಂದ 40 ದಾಖಲಾತಿಗಳನ್ನು ದಾವೆ ಗೊಸ್ಕರ ಸೃಷ್ಟಿ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ.

ದಾವಾ ಅಸ್ತಿ ಯಾರ ಹೆಸರಿನಲ್ಲಿ ಎಷ್ಟೆಟ್ಟು ಗುಂಟೆ ಖಾತೆ ಇದೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಎಲ್ಲಾ ಒಟ್ಟಿಗೆ ಇದೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಒಟ್ಟಿಗೆ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ತಾತನ ಹೆಸರಿಗೆ ಇತ್ತು ಎಂದು ಹೇಳುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು 95-96 ರಲ್ಲಿ ಒಟ್ಟು ಕುಟುಂಬದ ಆಸ್ತಿಯನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆಸಸ್ತಿಗಳನ್ನು ಯಾರು ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. 2 ಮತ್ತು 3 ನೆ ಪ್ರತಿವಾದಿ ವಿಭಾಗ ಮಾಡಿಕೊಂಡ ಮೇಲೆ 2 ನೇ ಪ್ರತಿವಾದಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ತನ್ನ ಭಾಗಕ್ಕೆ ಬಂದ ಅಸ್ತಿಯನ್ನು ಖಾತೆ ಮಾಡಿಸಿಕೊಂಡಿಲ್ಲದೆ ಇದ್ದುದರಿಂದ ಗಾಡಿ ಬೋರಯ್ಯ ನ ಹೆಸರಿಗೆ ಖಾತೆ ಇದೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು 95-96 ರಲ್ಲಿ ಮಾಡಿಕೊಂಡ ವಿಭಾಗದಂತೆ ಪ್ರತೇೀಕವಾಗಿ ಅಸ್ತಿಗಳನ್ನು ಅವರೇ ಅನುಭವ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತನ್ನ ಹೆಸರಿಗೆ ಪ್ರತ್ಯೇಕವಾಗಿ ಆಸ್ತಿಗಳನ್ನು ಖಾತೆ ಮಾಡಿಸಿಕೊಂಡ ಮೇಲೆ ಅದನ್ನು ನೀವು ಸಂಬಂಧ ಪಟ್ಟ ಪ್ರಾದಿಕಾರದಲ್ಲಿ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತೆ ಇಲ್ಲ ಎಂದು ಹೇಳುತ್ತಾರೆ. ನಿಮಗೆ ಪ್ರತ್ಯೇಕ ಖಾತೆ ಮಾಡಿಸಿಕೊಂಡ ವಿಚಾರ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ 8

ವರ್ಷಗಳ ಹಿಂದೆ ಎಂದು ಹೇಳುತ್ತಾರೆ. 8 ವರ್ಷಗಳ ಹಿಂದೆ ಪ್ರತ್ಯೇಕ ಖಾತೆ ಮಾಡಿಸಿಕೊಂಡ ವಿಚಾರ ಗೊತ್ತಾದ ನಂತರ ಪ್ರಶ್ನೆ ಮಾಡಲು ತೊಂದಂರೆ ಇತ್ತಾ ಎಂರೆ ಸಾಕ್ಷಿ ಗೊತ್ತಾದ ಮೇಲೆ ದಾವೆ ಹೂಡಿದ್ದು ಎಂದು ಹೇಳುತ್ತಾರೆ. ನೀವು ದಾವೆಯನ್ನು ಹುಾಡಿದ್ದೀರಾ ಎಂದರೆ ಸಾಕ್ಷಿ ನನ್ನ ತಂಗಿಯರು ಹೂಡಿದ್ದಾರೆ ಎಂದು ಹೇಳುತ್ತಾರೆ. ವಾದಿಯರು ಹಾಗೂ ನೀವು ಶಾಮಿಲಾಗಿ ಸುಳ್ಳು ಕತೆ ಕಟ್ಟಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನೀವು ನ್ಯಾಯಾಲಯಕ್ಕೆ ಸಲ್ಲಿಸಿದ ಲಿಖಿತ ಹೇಳಿಕೆ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ವಾದಿಗಳೊಂದಿಗೆ ಶಾಮಿಲಾಗಿ ಪ್ರತಿವಾದಿ 2 ರಿಂದ 4 ರವರ ಅಸಿತಯನ್ನು ಲಪಟಾಯಿಸುವ ಉದ್ದೇಶದಿಂದ ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ. ನೀವು , ವಾದಿಯರು ಹಾಗೂ 2 ರಿಂದ 4 ಪ್ರತಿವಾದಿಗಳು ದಾವೆ ಸಲ್ಲಿಸುವ ಪೂರ್ವದಲ್ಲಿ ಅಪರಿಚಿತ ವ್ಯಕ್ತಿಗಳು ಎಂದರೆ ಸಾಕ್ಷಿ ಒಟ್ಟು ಕುಟುಂಬದವರು ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಲಪಟಾಯಿಸಲು ನೀವು ಹಾಗೂ 2 ರಿಂದ 4 ನೇ ಪ್ರತಿವಾದಿಗಳು ಹಾಗೂ ವಾದಿಗಳು ಒಟ್ಟು ಕುಟುಬಂದ ಸದಸ್ಯರು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ವಾದಿಗಳು ಚಿತಾವಣೆಯ ಮೇರೆಗೆ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

ನ್ಯಾಯಾಲಯದಿಂದ ನಿಮಗೆ ನೋಟಿಸು ಬಂದಿತ್ತು ಎಂದರೆ ಸರಿ. ಸದರಿ ನೋಟಿಸಅನ್ನು ವಕೀಲರಿಗೆ ನೀಡಿ ವಕೀಲರ ಮುಖೇನ ನ್ಯಾಯಾಲಯಕ್ಕೆ ಹಾಜರಾಗಿ ದಾವೆ ನಡೆಸುತ್ತಿದ್ದೀರಾ ಎಂದರೆ ಸರಿ. ಈ ದಾವೆ ಹೂಡುವ ಮುನ್ನ ಹುಣಸೂರಿನ ವಕೀಲರಿಂದ ಸಂಸದ್ ಬೇಗಂ ಅನ್ನುವವವರಿಗೆ ತಿಳುವಳಿಕೆ ಪತ್ರವನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ತಿಳುವಳಿಕೆ ಪತ್ರವನ್ನು ತೋರಿಸಿದ್ದು ಅದರಲ್ಲಿರುವ ಸಹಿ ತನ್ನದೇ ಎಂದು ಒಪ್ಪಿ ಕೊಂಡ ಮೇರೆಗೆ ತಿಳುವಳಿಕೆ ಪತ್ರವನ್ನು ನಿಪಿ-14 ಎಂದು, ಸಾಕ್ಷಿ ಗುರುತಿಸಸಿದ ತನ್ನ ಸಹಿಯನ್ನು ನಿಪಿ-14 ಎ ಎಂದು ಗುರುತಿಸಲಾಯಿತು. ಸಂಸದ್ ಬೇಗಂ ಎಂಬುವವರು ನಿಮ್ಮ ತಾಯಿ ಎಂದರೆ ಸರಿ. ನಿಪಿ-14 ನ್ನು ವಕೀಲರಿಂದ ನಿಮ್ಮ ತಾಯಿಗೆ ಕಳುಹಿಸಿರುತ್ತೀರಾ ಎಂದರೆ ಸರಿಯಲ್ಲ. ಪ್ರತಿವಾದ ಪತ್ರ ಸಲ್ಲಿಸಸಿಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನ್ಯಾಯಾಲಯದ ಬಂದ ಸಮನ್ಸ್ ನಿಮಗೆ ಜಾರಿಯಾದ ವಿಳಾಸ , ಮನೆ ಸಂ. 3540 ಕ್ಕೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ಮನೆ ಸಂ. 3811 ಎಂದು ಹೇಳುತ್ತಾರೆ. ಸಾಕ್ಷಿಗೆ ನ್ಯಾಯಾಲಯದಿಂದ ನೀಡಲಾದ ಸಮನ್ಸ ನ್ನು ತೋರಿಸಿದ್ದು, ಅದರಲ್ಲಿರುವ ಸಹಿ ನಿಮ್ಮದು ಎಂದ ಮೇರೆಗೆ ಸಾಕ್ಷಿ ಸಹಿ ನನ್ನದಲ್ಲ, ಎಂದು ಹೇಳುತ್ತಾರೆ.

ಯುಸುಫ್ ಅಹಮ್ಮದ್ ಬಿನ್ ವಜೀರ ಅಹಮ್ಮದ್ ಎಂದರೆ ನೀವೇ ಎಂದರೆ ಸರಿ. ನ್ಯಾಯಾಲಯದಿಂದ ಅಮೀನ್ ದಾವೆ ಹೂಡಿರುವ ಬಗ್ಗೆ ಬಂದು ನಿಮಗೆ ಜಾರಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಬಂದು ಹೇಳಿದರು ಅದಕ್ಕೆ ಬಂದೆ ಎಂದು ಹೇಳುತ್ತಾರೆ. ನ್ಯಾಯಾಲಯದ ಅಮೀನ್ ರು ಸಮನ್ಸ ನ್ನು ಹಾಗೂ ಅಂದರ ಪ್ರತಿಯನ್ನು ತಂದು ಜಾರಿ ಮಾಡಿ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸಮನ್ಸ ಪ್ರತಿ ನನಗೆ ಬಂದಿಲ್ಲ, ನಾನು ಅದಕ್ಕೆ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ತನ್ನ ವಕೀಲರ ಮುಖೇನ ಸಲ್ಲಿಸಿದ ವಕಾಲತ್ ನ್ನು ತೆೋರಿಸಿದ್ದು, ಅರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಒಪ್ಪಿ ಕೊಂಡ ಮೇರೆಗೆ ವಕಾಲತ್ ನ್ನು ನಿಪಿ-15 ಸಾಕ್ಷಿಯ ಸಹಿಯನ್ನು ನಿಪಿ- 15 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಸಮನ್ಸ ರಲ್ಲಿರುವ ಸಹಿ ನಿಮ್ಮದೇ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಬಂದಂತ ಸಮನ್ಸ ನ ಪ್ರತಿಯನ್ನು ಹಾಜರುಪಡಿಸಲು ನಿಮಗೆನ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ನನಗೆ ಸಮನ್ಸ ಜಾರಿಯಾಗಿಲ್ಲ ಎಂದು ಹೇಳುತ್ತಾರೆ. ನಿಮಗೆ ವಾದಿ ದಾವೆ ಹೂಡಿದ ವಿಚಾರ ಹೇಗೆ ಗೊತ್ತಾಯಿತು ಎಂ ದರೆ ಸಾಕ್ಷಿ ವಾದಿ ನನ್ನ ವಿರುದ್ಧ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸ ನವರು ನನ್ನ ಮನೆಗೆ ಬಂದು, ಮನೆ ಬಿಟಟು ಕೊಡವಂತೆ ಹೇಳಿ ದಾವೆ ಬಿಟ್ಟು ಕೊಡುವ ವಿಚಾರ ಹೇಳಿದರು. ಯಾವ ತಿಂಗಳು , ವರ್ಷ , ದಿನಾಂಕ ದಂದು ಪೊಲೀಸ ನವರು ನಿಮ್ಮ ಮನೆಗೆ ಬಂದಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ , ಬಹಳ ದಿನಗಳಾಗಿದೆ ಎಂದು ಹೇಳುತ್ತಾರೆ. ನಿಪಿ-14 ರಲ್ಲಿ ಸುಮಯ್ಯ ಕೌಸರ್ ಕೋಂ ಜಯಿರ್ ಅಸ್ಲಾಂ ಎಂದರೆ ನಿಮ್ಮ ತಂಗಿ ಎಂದರೆ ಸರಿ. ನಿಪಿ-14 ರಲ್ಲಿ ನಮೂದಿರುವ ಮನೆ ಸಂ.13114/1021 ಸುಣ್ಣದ ಕೇರಿ

ಮೈಸೂರು ಎಂಬುದು ನಿಮ್ಮ ತಂಗಿಯ ಮನೆಯ ವಿಳಾಸ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾರ್ಡ್ ಸಂ. 25, ಮನೆ ನಂ. 3540 ರೆಹಮ್ಮತ್ ಮೊಹಲ್ಲಾ ಹುಣಸೂರು ನೀವು ವಾಸವಾಗಿರುವ ಮನೆ ಎಂದರೆ ಸಾಕ್ಷಿ ವಾರ್ಡ ನಂಬರ್ 10 ಮನೆ ಸಂ. 3811 ಆಗಿದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಆ ಮನೆಯಲ್ಲಿ ವಾಸ ಇಲ್ಲ ಎಂದು ಹೇಳುತ್ತಾರೆ. ನೀವು ಸದರಿ ವಿಳಾಸದಲ್ಲೇ ವಾಸ ವಾಗಿ ವಕೀಲರ ಮುಖೇನ ನೋಟಿಸ್ ನೀಡಿದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ನಿಮ್ಮ ತಾಯಿಗೆ ಹುಣಸೂರಿನ ಮನೆ ಸಂ 3811 ರಲ್ಲಿ ಭಾಗ ಬರಬೇಕು ಎಂದು ವಕೀಲರ ಮುಖೇನ ನೋಟಿಸು ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಯಾವುದೇ ವ್ಯಕ್ತಿ ಒಂದು ಮನೇಯಲ್ಲಿ ವಾಸ ಇದ್ದರೆ ಮನೆಗೆ ವಿಳಾಸಕ್ಕೆ ಅಧಾರ ಕಾರ್ಡ್ , ಪಡಿತರ ಚೀಟಿ , ಚುನಾವಣಾ ಗುರುತಿನ ಚೀಟಿ ಹಾಗೂ ಪ್ಯಾನ್ ಕಾರ್ಡ್ ಗಳು ಬರುತ್ತವೆ ಎಂದರೆ ಸರಿ. ಆಧಾರ ಕಾರ್ಡ್ , ಪಡಿತರ ಚೀಟಿ , ಚುನಾವಣಾ ಗುರುತಿನ ಚೀಟಿ ಹಾಗೂ ಪ್ಯಾನ್ ಕಾರ್ಡ್ ನೀವು ಯಾವ ಮನೆಯಲ್ಲಿ ವಾಸ ಇದ್ದೀರಿ ಎಂದು ತೋರಿಸಲು ಯಾವ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ಕೇಳಿಲ್ಲದೆ ಇದ್ದುದರಿಂದ ಕೊಟ್ಟಿಲ್ಲ ಎಂದು ಹೇಳುತ್ತಾರೆ ನೀವು ಹುಣಸೂರಿನಲ್ಲಿ ವಾಸ ಇಲ್ಲ, ಮೈಸೂರಿನ ಸುಣ್ಣದ ಕೇರಿಯಲ್ಲಿ ವಾಸ ಇದ್ದೀರಿ ಎಂದರೆ ಸಾಕ್ಷಿ ಹುಣಸೂರಿನಲ್ಲಿ ವಾಸ ಇದ್ದೇನೆ ಎಂದು ಹೇಳುತ್ತಾರೆ. ಹುಣಸುರಿನಲ್ಲಿ ವಾಸ ಇಲ್ಲದೇ ಇರುವುದರಿಂದ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಹುಣುಸೂರಿನಲ್ಲಿ ವಾಸ ಇದ್ದೇನೆ ಎಂದು ಹೇಳುತ್ತಾರೆ. ಮ ನೆ ಸಂ. 3811 ರಲ್ಲಿ ವಾಸ ಇದ್ದೀನಿ ಎಂದು ತೋರಿಸಲು ನಿಮ್ಮ ಬಳಿ ಯಾವುದೆ ದಾಖಲಾತಿ ಇಲ್ಲ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ನೀವು ಮೈಸೂರಿನ ವಾಸಿ ಇದ್ದು, 2015 ರಲ್ಲಿ ಮನೆ ಸಂ. 3540 ರಲ್ಲಿ ವಾಸ ಇದ್ದೀರಿ ಎಂದರೆ ಸರಿಯಲ್ಲ.

ದಾವಾ ಅಸ್ತಿ ನಿಮ್ಮ ತಾಯಿಗೆ ಸೇರಿದ ಆಸಿತ ಎಂದರೆ ಸಾಕ್ಷಿ ನನ್ನ ತಂದೆಗೆ ಸೇರಿದ ಆಸ್ತಿ ಎಂದು ಹೇಳುತ್ತಾರೆ . ದಾವಾ ಅಸ್ತಿ ನಿಮ್ಮ ತಂದೆಗೆ ಸೇರಿತ್ತು ಎಂದು ತೋರಿಸಲು ಯಾವುದೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ತಾಯಿ ಯ ಬಳಿ ಇದ್ದು ಅವರ ಇರುವವರೆಗೂ ಯಾವುದೆಪಿ ದಾಖಲಾತಿ ತೆಗೆದುಕೊಳ್ಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ನಿಮ್ಮ ತಾಯಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಕೊಂಡಂತ ಆಸ್ತಿ ಎಂದು ಹೇಳುತ್ತಾರೆ.

ದಾವಾ ಅಸಿತ ನಿಮ್ಮ ತಾಯಿಯ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ದಿಃ 21.11.2013 ರಂದು ವಾದಿಗೆ ನೊಂದಾಯಿತ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ನ್ಯಾಯಾಲಯಲ್ಲಿ ವಾದಿ ಎನೇನೂ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂದು ಒದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ಎನೂ ಒದಿಲ್ಲ ಎಂದು ಹೇಳುತ್ತಾರೆ. ಪ್ರತಿವಾದ ಪತ್ರದಲ್ಲಿ ನಿದಿಮ್ಮ ವಕೀಲರ ಮುಖೇನ ದಾನ ಪತ್ರದ ವಿಚಾರ ಹೇಳಿ ಬರೆಸಿದ್ದೀರಾ ಎಂದರೆ

ಸಾಕ್ಷಿ ಬರೆಸಿದ್ದೇನೆ ಎಂದು ಹೇಳುತ್ತಾರೆ. 2013 ರಲ್ಲಿ ದಾನ ಪತ್ರ ಬರೇಯಲಾಗಿದೆ ಎಂಬ ವಿಚಾರವನ್ನು ಇಲ್ಲಿಯವರೆಗೂ ಎಲ್ಲೂ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಯಾರಿಗೂ ಪ್ರಶ್ನೆ ಮಾಡಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನಾನು ಯಾವ ದಾವೆಯನ್ನು ಹೂಡಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಾಯಿ ಬರೆದುಕೊಟ್ಟ ದಾನ ಪತ್ರದ ಮೇರೆಗೆ ವಾದಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ವಾದಿಯೆ ದಾವಾ ಆಸ್ತಿಗೆ ಕಂದಾಯ ಕಟ್ಟಿ ವಾದಿಯೆ ಸ್ವಾಧಿನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಾವು ಸ್ವಾ ಧಿನ ಇದ್ದೇನೆ ಎಂದು ಹೇಳುತ್ತಾರೆ.ನೀವು ಸ್ವಾಧಿನ ಇದ್ದೀರಿ ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿ ವಜೀರ ಅಹಮ್ಮದ್ ರವರಿ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ವಜೀರ ಅಹಮ್ಮದ್ ನನ್ನ ತಂದೆ ಎಂದು ಹೇಳುತ್ತಾರೆ.

ದಿಃ 21.11.2013 ರಿಂದ ವಾದಿಯೆ ದಾವಾ ಅಸ್ತಿಯಲ್ಲಿ ಸ್ವಾಧಿನ ಇದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಾಯಿ ವಾದಿಗೆ ದಾನ ಪತ್ರ ಬರೆದುಕೊಟ್ಟಾಗಿನಿಂದ ವಾದಿ ಹಾಗೂ ನಿಮ್ಮ ತಾಯಿಯನ್ನು ಕಂಡರೆ ನಿಮಗೆ ಇಷ್ಟ ಇಲ್ಲ ಎಂದರೆ ಸಾಕ್ಷಿ ತಾಯಿ ನನ್ನ ಜೊತೆಯಲ್ಲಿ ವಾಸ ಇದ್ದಾರೆ ಎಂದು ಹೇಳುತ್ತಾರೆ. ನಿಮ್ಮ ತಾಯಿ ವಾದಿಗೆ ಬರೆದುಕೊಟ್ಟ ದಾನ ಪತ್ರದಿಂದ ನಿಮಗೆನ ಅಸಮಧಾನ ಇದೆ ಎಂದರೆ ಸಾಕ್ಷಿ ನಮಗೆ ಅದು ಎಲ್ಲಾ ಏನೂ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಾಯಿ ಜೊತೆಯಲ್ಲಿ ಇದ್ದಾರೆ ಎಂದು ಪ್ರತಿ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿಲ್ಲ ಎಂದು ಹೇಳುತ್ತಾರೆ. ನೀವು ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿಯ ಯಾವ ಭಾಗದಲ್ಲಿ ಇದ್ದೀರಿ ಎಂದು ಬರೆಸಿಲ್ಲ ಎಂದರೆ ಸರಿ. ನಿಮ್ಮ ತಾಯಿ ದಾವಾ ಅಸ್ತಿಯ ಯಾವ ಭಾಗದಲ್ಲಿ ಇದ್ದಾರೆ ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಜೊತೆಯಲ್ಲಿ ಇದ್ದೇವೆ ಬರೆಸಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಯಾವತ್ತೂ ಸ್ವಾಧಿನ ಇಲ್ಲ, ವಾದಿಗೆ ದಾನ ಪತ್ರ ಬರೆಯಲಾಯಿತು ಎಂಬ ಕಾರಣಕ್ಕಾಗಿ ಅವರಿಗೆ ತೊಂದರೆ ಕೊಡಲು ದಾವಾ ಆಸ್ತಿಯ ಸ್ವಾಧಿನದಲ್ಲಿ ಇದ್ದೀನಿ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ದಿಃ 10.08.2015 ರಲ್ಲಿ ಬೆಳಿಗ್ಗೆ 09.30 ಗಂಟೆ ಸಮಯದಲ್ಲಿ ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿರುತ್ತೀರಿ ಎಂದರೆ ಸರಿಯಲ್ಲ. ಅದೇ ದಿನ ವಾದಿ ಹುಣಸೂರಿನ ಟೌನ್ನ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದು, ಪೊಲೀಸ ನವರು ನಿಮ್ಮನ್ನು ಠಾಣೆಗೆ ಕರೆಸಿದ್ದರು ಎಂದರೆ ಸಾಕ್ಷಿ ಎಂದರೆ ಸರಿಯಲ್ಲ. ಪೊಲಿಸ ನವರು ದಾವಾ ಆಸ್ತಿಯ ಸಂಬಂಧ ವಾದಿಗೆ ತೊಂದರೆ ಕೊಡದಂತೆ ತಾಕಿತ್ತು ಮಾಡಿ , ವಾದಿಗೆ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಸೂಚಿಸಿದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ವಾದಿ ನಿಮ್ಮ ವಿರುದ್ಧ ಈದಾವೆಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ , ನಾನು ಗಲಾಟೆ ಮಾಡಿಲ್ಲ ಎಂದು ಹೇಳುತ್ತಾರೆ.

ನೀವು ವಾದಿಯೊಂದಿಗೆ ಚೆನ್ನಾಗಿ ಇದ್ದೀರಾ ಎಂದರೆ ಸಾಕ್ಷಿ ಅವರು ಚೆನ್ನಾಗಿಲ್ಲ , ನಾನು ಚೆನ್ನಾಗಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ತಕರಾರಿನಲ್ಲಿ ನೀವು ಹಾಗೂ ವಾದಿ ಚೆನ್ನಾಗಿದ್ದೀರಿ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಾಯಿ ಸಂಸದ್ ಬೇಗಂ

ರವರು ವಾದಿ ಜೊತೆಗೆ ಇದ್ದಾರೆ ಎಂದರೆ ಸುಳ್ಳು. ನಿ ಮ್ಮ ತಾಯಿ ವಾದಿಗೆ ದಾನ ಪತ್ರ ಬರೆದುಕೊಟ್ಟರು ಎಂಬ ಕಾರಣಕ್ಕಾಗಿ ನಿಮ್ಮ ತಾಯಿಗೆ ಊಟ , ಬಟ್ಟೆ ಕೊಡದೆ ನಿರ್ಲಕ್ಷ ್ಯ ಮಾಡಿದ್ದರಿಂದ ವಾದಿಯೊಂದಿಗೆ ನಿಮ್ಮ ತಾಯಿ ಇದ್ದಾರೆ ಎಂದರೆ ಸಾಕ್ಷಿ ನಾನು ತಾಯಿಯನ್ನು ಚೆನ್ನಾಗಿ ನೋಡಿಕೊಂಡು ಇದ್ದೀನಿ ವಾದಿ ಬಂದು ನಮ್ಮನ್ನು ಬೇರೆ ಬೇರೆ ಮಾಡುತ್ತಾರೆ ಎಂದು ಹೇಳುತ್ತಾರೆ. ವಾದಿ ನಿಮಗೆ ತೆಖಂದರೆ ಕೊಡದಂತೆ ಹಲವಾರು ಬಾರಿ ಕೇಳಿದ್ದರು, ನೀವು ಉಡಾಪೆ ಮಾಡಿರುತ್ತೀರಾ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಇರುವ ಮನೆ ನಿಮ್ಮ ತಾಯಿ ಕಟ್ಟಿದ್ದು ಎಂದರೆ ಸಾಕ್ಷಿ ನನ್ನ ತಂದೆ ಕಟ್ಟಿದ್ದು ಎಂದು ಹೇಳುತ್ತಾರೆ. ದಾವಾ ಅಸಿತಯಲ್ಲಿ ಮನೆಯನ್ನು ನಿಮ್ಮ ತಂದೆ ಕಟ್ಟಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸಾಕ್ಷಿ ಚೆನ್ನಾಗಿದ್ದಾಗ ನನ್ನ ತಾಯಿಯ ಹತ್ತಿರ ನಾನು ಕೇಳಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ನಿಮ್ಮ ತಾಯಿಗೆ ಸೇರಿರುವುದರಿಂದ ನಿಮಗಾಗಲಿ, ನಿಮ್ಮ ಸಹೋದರರಿಗಾಗಲಿ , ತಂದೆಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಹೇಳುತ್ತಾರೆ. ನೀವು ಸ್ವಾಧಿನದಲ್ಲಿ ಇದ್ದೀನಿ ಎಂದು ಹೇಳುವ ಜಾಗದ ಚಕ್ಕುಬಂಧಿ ಹೇಳಲಾಗುತ್ತದೆ ಎಂದರೆ ಸಾಕ್ಷಿ ಹೇಳುತ್ತೇನೆ ಎಂದು ಹೇಳುತ್ತಾರೆ. ಪೂ- ರೆಹಮಾನ ಮನೆ , ಇವರ ತಂದೆಯ ಹೆಸರು ಗೊತ್ತಿಲ್ಲ, ಪ- ಬಸವರಾಜು ರವರ ಮನೆ , ಕಲೀಮ್ ರವರು ಖರೀದಿಸಿರುತ್ತಾರೆ. ರೆಹಮಾನ್ ರವರ ಮನೆಯ ಪೂ- ಖಾಲಿ ನಿವೇಶನ ಇದೆ . ಸದರಿ ನಿವೇಶನ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ, ರೆಹಮಾನ್ ರವರ ಮನೆಯ ಪ- ಬಸವರಾಜು ರವರ ಮನೆಯನ್ನು ಖರಿದಿಸಿದ ಕಲೀ ಮ ರವರ ಮನೆ. ನಾನು ಸ್ವಾಧಿನ ಇರುವ ಮನೆಯ ಉ- ರಸ್ತೆ ಇದೆ . ದ- ರಫೀಕ್ ಅಹಮ್ಮದ್ ರವರ ಮನೆ. ರಫೀಕ್ ಅಹಮ್ಮದ್ ರವರ ಮನೆಯ ಉ- ನಮ್ಮ ಮನೆ ಇದೆ . ನೀವು ಮೇಲೆ ಹೇ ೇಳಿ ಚಕ್ಕುಬಂಧಿ ವಾಸ ಇರುವ ಅಕ್ಕ ಪಕ್ಕದ ಮನೆಯವರು ಕರೆದುಕೊಂಡು ಬಂದು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಿಮ್ಮ ತಾಯಿ ಇರುವ ಮನೆಯ ಚಕ್ಕುಬಂಧಿ ಎನೂ ಎಂದರೆ ಸಾಕ್ಷಿ ಒಂದೇ ಮನೆಯಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ನೀವು ಮೇಲೆ ಹೇಳಿದ ಚಕ್ಕುಬಂಧಿ ಯಲ್ಲಿ ದಾವಾ ಸ್ವತ್ತು ಬರುವುದಿಲ್ಲ ಎಂದರೆ ಸರಿಯಲ್ಲ. ಮನೆ ಸಂ. 1838/3811 ರ ಪೂ- ಸರ್ಫುಲ್ಲಾ ರವರ ಮನೆ ಎಂದರೆ ಸಾಕ್ಷಿ ಅವರು ಮಾರಾಟ ಮಾಡಿ ಹೋಗಿದ್ದಾರೆ ಎಂದು ಹೇಳುತ್ತಾರೆ. ಪ- ಅನ್ವರ್ ರವರ ಮನೆ ಎಂಂದರೇ ಸಾಕ್ಷಿ ಅವರು ತೀರಿಕೊಂಡ ನಂತರ ರಫೀಕ ರವರು ಖರಿದಿ ಮಾಡಿದ್ದಾರೆ ಎಂದು ಹೇಳುತ್ತಾರೆ.

ಉ- ರಸ್ತೆ ಎಂದರೆ ಸರಿ. ದ- ಎಂ ಪಿ ದಸ್ತಗಿರ ರವರ ಮನೆ ಎಂದರೆ ಸರಿ , ಸಾಕ್ಷಿ ಮುಂದುವರೆದು ರೆಹಮಾನ್ ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ. 2015 ರಿಂದ ಹುಣಸೂರಿನ ವಿದಾನ ಸಬೆ, , ಲೋಕಸಭೆ , ಪುರಸಭೆ ಯ ಚುನಾವಣೆಗಳಲ್ಲಿ ಮತ ಚಲಾವಣೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆ ಎಂದು ಹೇಳುತ್ತಾರೆ. 2015 ರಲ್ಲಿ ಮತ ಚಲಾವಣೆ ಮಾಡಿದಾಗ ಯಾವ ಮನೆ ಸಂ. ವಾಸ ಇದ್ದ ಬಗ್ಗೆ ಮತ ಚಲಾವಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ

ನನಗೆ ಅಷ್ಟೂ ಇರಲಿಲ್ಲ ಎಂದು ಹೇಳುತ್ತಾರೆ. 2018 ರಲ್ಲಿ ಯಾವ ಮನೆ ಸಂ. ವಾಸ ಇದ್ದ ಬಗ್ಗೆ ಮತ ಚಲಾವಣೆ ಮಾಡಿರುತ್ತೀರಾ ಸಾಕ್ಷಿ 3811 ರಲ್ಲಿ ಎಂದು ಹೇಳುತ್ತಾರೆ. 2018 ರಲ್ಲಿ ಮನೆ ಸಂ. 3811 ರ ರಿಂದ ಮತ ಚಲಾವಣೆ ಮಾಡಿರುತ್ತೀರಾ ಎಂದು ತೋರಿಸಲು ದಾಖಲಾತಿ ಕೊಡಲು ಯಾವುದೇ ತಾಂದರೆ ಇಲ್ಲ ಎಂದರೆ ಸರಿ. 2018 ರಲ್ಲಿ ಮನೆ ಸಂ.3811 ರಿಂದ ಮತ ಚಲಾವಣೆ ಮಾಡಿದೇ ಎಂದು ತೋರಿಸಲು ದಾಖಲಾತಿ ಇದೆಯೇ ಎಂದರೆ ನಾವು ಯಾವುದೇ ದಾಖಲಾತಿ ಇಟ್ಟಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ಪೂ-ಪ 55, ಉ-ದ 50 ಅಡಿ ಇದೆ. ಸದರಿ ವಿಸ್ತೀರ್ಣ ದ ಲ್ಲಿ ಎಷ್ಟು ಅಡಿಗಳಲ್ಲಿ ಮನೆ ಕಟ್ಟಲಾಗಿದೆ ಸಾಕ್ಷಿ ಅಳತೆ ಮಾಡಿಲ್ಲ ಎಂದು ಹೇಳುತ್ತಾರೆ. ಮನೆಯ ಅಳತೆ ಹಾಗೂ ಅದರ ವಿವರವನ್ನು ಪ್ರತಿವಾದ ಪತ್ರದಲ್ಲಿ ಬರೆಸಿ ಹಾಕಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯೇ ಸ್ವಾಧಿನದಲ್ಲಿ ಇದ್ದಾರೆ ಎಂದರೆ ಸುಳ್ಳು. ನೀವು ಯಾವತ್ತೂ ಸ್ವಾಧಿನ ಇಲ್ಲ ಎಂದರೆ ಸಾಕ್ಷಿ ಇದ್ದೀನಿ ಎಂದು ಹೇಳುತ್ತಾರೆ.

ನಿಡಿ-1 ರಿಂ ದ 16 ದಾವಾ ಅಸ್ತಿಗೆ ಸಂಬಂದಿಸಿದಲ್ಲ ಅಂದರೆ ಸರಿಯಲ್ಲ. ನಿಡಿ-1 ರಿಂದ 16 ರನ್ನು ದಾವೆ ಗೋಸ್ಕರ ಸೃಷ್ಟಿ ಮಾಡಲಾಗಿ ದೆ ಎಂದರೆ ಸರಿಯಲ್ಲ. ನಿಡಿ-6 ರಿಂದ 16 ರವರೆಗೆ ದಾಖಲಾತಿಗಳು ನಿಮ್ಮ ಹೆಸರಿಗೆ ಇಲ್ಲ ಎಂದರೆ ಸಾಕ್ಷಿ ನನ್ನ ಹೆಸರಿನಲ್ಲಿ ಇಲ್ಲ , ತಂದೆಯ ಹೆಸರಿಗೆ ಇದೆ ಎಂದು ಹೇಳುತ್ತಾರೆ. ನೀವು ದಾವಾ ಆಸ್ತಿಯ ಸ್ವಾಧಿನದಲ್ಲಿ ಇರುವುದನ್ನು ನೋಡಿದವರು ಇದ್ದಾರೆ ಎಂದರೆ ಸಾಕ್ಷಿ ಅಕ್ಕ ಪಕ್ಕದ ಮನೆಯ ವರು ಇದ್ದಾರೆ ಎಂದು ನಹೇಳುತ್ತಾರೆ. ಅವರ ಹೆಸರೇನು ಎಂದರೆ ಸಾಕ್ಷಿ ಆಯಿಷಾ , ಜಮೃತ , ರಫೀಕ ಅಹಮ್ಮದ್ ಮುಂತಾದವರು ಇದ್ದಾರೆ ಎಂದು ಹೇಳುತ್ತಾರೆ. ಆಯಿಷಾ , ಜಮೃತ , ರಫೀಕ ಅಹಮ್ಮದ್ ರವರುಗಳ ಮನೆ ಯ ಸಂ. ಎಷ್ಟು ಎಂದರೆ ಸಾಕ್ಷಿ ಅವರ ಮನೆ ಸಂ. ಗೊತ್ತಿಲ್ಲ ಎಂದು ಹೇಳುತ್ತಾರೆ. ನೀವು ಯಾವತ್ತೂ ದಾವಾ ಅಸಿತಯ ಸ್ವಾದಿನದಲ್ಲಿ ಇಲ್ಲ, ಮೇಲೆ ಹೇಳಿದವರು ಯಾರು ನಿಮ್ಮನ್ನು ಸ್ವಾದಿನದಲ್ಲಿ ಇುರವುದನ್ನು ನೋಡಿಲ್ಲ, ಸುಳ್ಳು ಹೇಳು ತ್ತಿದ್ದೀರಾ ಎಂದರೆ ಸರಿಯಲ್ಲ. ಆಯಿಷಾ ರವರ ಗಂಡನ ಹೆಸರು ಗೊತ್ತಿಲ್ಲ, ಜಮೃತ ಮತ್ತು ರಫೀಕ ಅಹಮ್ಮದ್ ರವರ ತಂದೆಯ ಹೆಸರು ಎನೂ ಎಂಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

(ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಸಮಯವನ್ನು ಕೋರಿದ್ದು, ಸಮಯವನ್ನು ನೀಡಲಾಯಿತು.)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

ನಾನು ದ್ವೀತಿಯ ಪಿಯುಸಿ ವರೆಗೂ ವಿದ್ಯಾಭಾಸ ಮಾಡಿರುತ್ತೇನೆ. ನಾನು ಹುಣಸೂರು ತಾಲ್ಲೂಕು, ವಾರಂಚಿ ಗ್ರಾಮದ ಸರ್ವೇ ನಂಬರ್ 5 ನ್ನು ನೋಡಿರುತ್ತೇನೆ. ಸರ್ವೇ ನಂಬರ್ 5 ಎಷ್ಟು ಬ್ಲಾಕ್ ಗಳಾಗಿ ವಿಂಗಡನೆ ಯಾಗಿದೆ ಎಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸರ್ವೇ ನಂಬರ್ 5 ರಲ್ಲಿ ನಿಮಗೆನಾದರೂ ಜಮೀನು ಮಂಜೂರು ಆಗಿದೆಯೇ ಅದ್ಧವಾ ಅನುಭವದಲ್ಲಿ ಇದ್ದೀರಿ ಎಂದರೆ ಸಾಕ್ಷಿ ಅನುಭವದಲ್ಲಿ ಇದ್ದೇನೆ ಎಂದು ಹೇಳುತ್ತಾರೆ. ನೀವು ಸರ್ವೇ ನಂಬರ್ 5 ರ ಯಾವ ಬ್ಲಾಕ್ ನಲ್ಲಿ ಅನುಭವದಲ್ಲಿ ಇದ್ದೀರಾ ಎಂದರೆ ಸಾಕ್ಷಿ ಬ್ಲಾಕ್ ನಂ. 40 ರಲ್ಲಿ ಎಂದು ಹೇಳುತ್ತಾರೆ. ಸರ್ವೇ ನಂಬರ್ 5 ಬ್ಲಾಕ್ ನಂ. 40 ರ ಚಕ್ಕುಬಂಧಿ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸರ್ವೇ ನಂಬರ್ 5 ಬ್ಲಾಕ್ ನಂ.40 ಪಹಣಿ ಯಾರ ಹೆಸರಿಗೆ ಇದೆ ಎಂದರೇ ಸಾಕ್ಷಿ ಕಾಳಮ್ಮ ಎಂಬುವವರ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ.

ಪ್ರತಿವಾದಿ ಸ್ವಾ ಧಿನದಲಿ ಇದ್ದಾರೆ ಎಂದು ಹೇಳಲಾಗುವ ಜಮೀನಿನ ಬ್ಲಾಕ್ ನಂ. ಎಷ್ಟು ಎಂಂದರೆ ಸಾಕ್ಷಿ 38 ಎಂದು ಹೇಳುತ್ತಾರೆ. ಸರ್ವೇ ನಂಬರ್ 5 ಬ್ಲಾಕ್ ನಂ.38 ರ ನಕಾಶೆಯನ್ನು ನೊಡಿದ್ದೀರಾ ಎಂದರೆ ಸಾಕ್ಷಿ ನೊಡಿದ್ದೇನೆ ಎಂದು ಹೇಳುತ್ತಾರೆ.

ಸರ್ವೇ ನಂಬರ್ 5 ಬ್ಲಾಕ್ ನಂ.38 ರ ಪೂ-ನನಗೆ ಸೇರಿದ ಜಮೀನು, ಪ-ನಾಗರಾಜು (ಡಿ ಡಬ್ಲೂ -2) ರವರ ಜಮೀನು. ಸದರಿ ನಾಗರಾಜು ರವರ ಬ್ಲಾಕ್ ನಂಬರ್ ಎಷ್ಟು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಉ- ಜೋಗಯ್ಯ ರವರ ಜಮೀನು, ಜೋಗಯ್ಯ ರವರ ಜಮೀನಿನ ಬ್ಲಾಕ್ ನಂ. ಎಷ್ಟು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದ-ಜವರಮ್ಮ ಹಾಗೂ ಚಲುವಯ್ಯ ರವರ ಜಮೀನು, ಜವರಮ್ಮ ಹಾಗೂ ಚಲುವಯ್ಯ ರವರ ಜಮೀನಿನ ಬ್ಲಾಕ್ ನಂ. ಎಷ್ಟು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಗೆ ಸೇರಿದ ಬ್ಲಾಕ್ ನಂ. 38 ರಲ್ಲಿ ಸ್ವಾದಿನದಂಲ್ಲಪಿ ಇದ್ದಾರೆ ಎಂದು ಹೇಳಿದ್ದು ಅದೇ ರೀತಿಯಲ್ಲಿ ಸರ್ವೇ ನಂಬರ್ 5 ರ ಬೇರೆ ಬೇರೆ ಬ್ಲಾಕ್ ಜಮೀನು ಗಳಲ್ಲಿ ಬೇರೆ ಬೇರೆ ವ್ಯಕ್ತಿಗಳು ಸ್ವಾಧಿನದಲ್ಲಿ ಇದ್ದಾರೆ ಎಂದರೆ ಸರಿ. ಸರ್ವೇ

ನಂಬರ್ 5 ರ ಯಾವಾ ಯಾವ ಬ್ಲಾಕ್ ಗಳು ಯಾವ ಚಕ್ಕುಬಂಧಿಯೊಳಗೆ ಬರುತ್ತದೆ ಎಂಬುದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸರ್ವೇ ನಂಬರ್ 5 ರ ಯಾವ ಯಾವ ಬ್ಲಾಕ್ ಗಳಲ್ಲಿ ಯಾರಾರು ಸ್ವಾಧಿನದಲ್ಲಿ ಇದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಹುಣಸೂರು ತಾಲ್ಲೂಕು , ವಾರಂಚಿ ಗ್ರಾಮದ ಸರ್ವೇ ನಂಬರ್ 5 ಬ್ಲಾಕ್ ನಂ. 30 ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸರ್ವೇ ನಂಬರ್ 5 ಬ್ಲಾಕ್ ನಂ. 30 ರಲ್ಲಿ 3 ಎಕರೆ ವಿಸ್ತಿರ್ಣ ದ ಜಮೀನು ಇದೆ ಎಂದರೇ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೇ ನಂಬರ್ 5 ಬ್ಲಾಕ್ ನಂ.30 ರ ಪೂ- ಸರ್ವೇ ನಂಬರ್ 5 ಬ್ಲಾಕ್ ನಂ.34 ಎಂದಂರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.ಉ- ಸರ್ವೇ ನಂಬರ್ 5 ಬ್ಲಾಕ್ ನಂ.29 ಎಂದರೆ ಸಾಕ್ಷಿ ಗೋತ್ತಿಲ್ಲ ಎಂದು ಹೇಳುತ್ತಾರೆ. ದ-ಸರ್ವೇ ನಂಬರ್ 5 ಬ್ಲಾಕ್ ನಂ.31 ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಪ- ನಾಗರಾಜು ಎಂಬುವವರು ಬಗರಹುಕ್ಕಂ ಆಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಅಸ್ತಿಯನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಸರ್ವೇ ನಂಬರ್ 5 ಬ್ಲಾಕ್ ನಂ.30 ಹಾಗೂ ಸರ್ವೇ ನಂಬರ್ 5 ಬ್ಲಾಕ್ ನಂ.38 ಬೇರೆ ಎಂದರೆ ಸರಿ. ಸರ್ವೇ ನಂಬರ್ 5 ಬ್ಲಾಕ್ ನಂ.30 ಬೇರೆ ಚಕ್ಕುಬಂಧಿ ಇದ್ದು ,ಸರ್ವೇ ನಂಬರ್ 5 ಬ್ಲಾಕ್ ನಂ.38 ಕ್ಕೆ ಬೇರೆ ಚಕ್ಕುಬಂಧಿ ಇದೆ ಎಂದರೆ ಸರಿ.

ಪ್ರತಿವಾದಿ ನಿಮ್ಮ ಊರಿನವರು , ಜನಾಂಗದವರು ಹಾಗೂ ಸಂಬಂದಿ ಎಂದರೆ ಸಾಕ್ಷಿ ಒಂದೇ ಊರಿನವರು , ಜನಾಂಗದವರು, ಆದರೆ ಸಂಬಂಧಿ ಅಲ್ಲಾ ಎಂದು ಹೇಳುತ್ತಾರೆ . ಪ್ರತಿವಾದಿ ನಿಮ್ಮ ಸಂಬಂದಿಯಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ವಾದಿಯೆ ಸ್ವಾದಿನ ಅನುಭವದಲ್ಲಿದ್ದು, ಪ್ರತಿವಾದಿಯರು ಯಾವತ್ತು ಸ್ವಾಧಿನ ಅನುಭವದಲ್ಲಿ ಇಲ್ಲ ಎಂದರೆ

ಸರಿಯಲ್ಲ. ವಾದಿ ಸ್ವಾದಿನ ಅನುಭವದಲ್ಲಿ ಇದ್ದರು ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.